ಶ್ರೀ ಜೆ.ಎಸ್. ಬಾಗಲಕೋಟ್.—ಅಂತಹ ಯಾವುದೇ ಕಂಪ್ಲೇಟ್ ಬಂದರೂ ಅದನ್ನು ಆಯಾಯ ಕಾಲದಲ್ಲಿಯೇ ನಿಶ್ಚಿತವಾಗಿ ಕ್ರಮಗೊಳಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ನನ್ನ ಪೂಹಿಶಿ ಪ್ರಕಾರ ಇಂತಹ ಯಾವುದೇ ಕ್ರಮ ಇದುವರೆಗೆ ಜರುಗಿಲ್ಲ.

ಹಾಲು ಉತ್ಪಾದಕರ ಸಹಕಾರ ಸಂಘಗಳು

೧೩೫೫. ಶ್ರೀ ಎನ್. ಟಿ. ಬೊಮ್ಮಣ್ಣ (ಕೂಡ್ಲಿಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಪಶ್ಚಿ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧೀನದಲ್ಲಿರುವ ಡೈರಿಗಳ ಸಂಖ್ಯೆ ಎಷ್ಟು ?

ಆ) ಬೆಂಗಳೂರು ಡೈರಿ ಮತ್ತು ಯಲಹಂಕದಲ್ಲಿರುವ ಮದರ್ ಡೈರಿಗಳು ಇದರ ಅಧೀನದಲ್ಲಿವೆಯೆ?

ಇ) ಇಲ್ಲದಿದ್ದಲ್ಲಿ ಈ ಎರಡು ಡೈರಿಗಳನ್ನು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ವಹಿಸಿ ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತರ ಅಧೀನದಲ್ಲಿ ೭ ಡೈರಿಗಳು ಹಾಗೂ ಎರಡು ಪ್ರತ್ಯೇಕ ಪ್ಯಾಡಕ್ಟ್ ಡೈರಿಗಳಿವೆ.

ಆ) ಹೌದು.

ಇ) ಬೆಂಗಳೂರಿನ ಡೈರಿಯ ಹಸ್ತಾಂತರ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಎನ್. ಟಿ. ಬೊಮ್ಮಣ್ಣ.—ಮಾನ್ಯ ಅಧ್ಯಕ್ಷರೇ, ಯಲಹಂಕದಲ್ಲಿರುವ ಮದರ್ ಡೈರಿಯನ್ನು ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಲಿಗೆ ಸಂಪೂರ್ಣವಾಗಿ ವಹಿಸಿಕೊಡಬೇಕು. ವಹಿಸಿ ಕೊಡದಿದ್ದರೆ ಕೂಡಲೇ ವಹಿಸಿಕೊಡುವ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮದರ್ ಡೈರಿಯನ್ನು ಬಿಟ್ಟು ಬೆಂಗಳೂರು ಡೈರಿಯನ್ನು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ವರ್ಗಾಯಿಸಬೇಕೆಂದು ಒಂದು ನಿರ್ಣಯ ಮಂತ್ರಿ ಮಂಡಲದ ಮುಂದೆ ಇದೆ. ಅದರ ನಿರ್ಣಯ ಬಂದ ಕೂಡಲೇ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಟಿ. ಬೊಮ್ಮಣ್ಣ.—ಬೆಂಗಳೂರು ಡೈರಿಯನ್ನು ಹಸ್ತಾಂತರಿಸುವ ತೀರ್ಮಾನ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದೀರಿ, ಯಾವಾಗ ಅದನ್ನು ಹಸ್ತಾಂತರ ಮಾಡುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಅದು ಒಪ್ಪಿಗೆಗಾಗಿ ಮಂತ್ರಿಮಂಡಲದ ಮುಂದೆ ಇದೆ; ಸಧ್ಯದಲ್ಲಿದೆಯೇ ಮಂತ್ರಿಮಂಡಲದ ನಿರ್ಣಯ ತೆಗೆದುಕೊಳ್ಳುತ್ತದೆ, ನಂತರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಟಿ. ಬೊಮ್ಮಣ್ಣ.—ತಮಿಳುನಾಡಿನ ಈರೋಡ್‌ನಿಂದ ಬೆಂಗಳೂರು ನಗರಕ್ಕೆ ಪ್ರತಿ ದಿನ ಸಾವಿರಾರು ಲೀಟರ್ ಹಾಲು ಸರಬರಾಜು ಆಗುತ್ತಾ ಇದೆ. ಇದು ಕಳಪೆ ದರ್ಜೆಯ ಹಾಲಾಗಿದ್ದು, ಇದನ್ನು ನಿಲ್ಲಿಸಿದರೆ ಬೆಂಗಳೂರು ಹಾಗೂ ಮದರ್ ಡೈರಿಯ ಹಾಲಿನ ಬೇಡಿಕೆ ಹೆಚ್ಚಾಗುತ್ತದೆ ಇದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕ್ರಮ ತೆಗೆದುಕೊಳ್ಳುತ್ತೇನೆ.